ಇಳಿದು ಬಾ ತಾಯಿ

ಇಳಿದು ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ ನುಸುಳಿ ಬಾ
ದೇವ ದೇವರನು ತಣಿಸಿ ಬಾ
ದಿಗ್ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ

ನಿನಗೆ ಮೊಡಮಡುವೆ
ನಿನ್ನ ನುಡುತೊಡುವೆ
ಏಕೆ ಎಡೆತಡೆವೆ ಸುರಿದು ಬಾ
ಕಗ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೇ ಬಾ ತಾಯಿ ಇಳಿದು ಬಾ

ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ ಕರೆ ಕರವ ಬಾ
ಕರು ಕಂಡ ಕರುಳೆ
ಮನವುಂಡ ಮರುಳೆ
ಉತ್ತಂಡ ಅರುಳೆ
ಸುಳಿ ಸುಳಿದು ಬಾ
ಶಿವ ಶುಭ್ರ ಕರುಣೆ
ಅತಿಕೆಂಚದರುಣೆ
ವಾತ್ಸಲ್ಯವರಣೆ ಇಳಿ ಇಳಿದು ಬಾ

ಸುರ ಸ್ವಪ್ನ ವಿದ್ದ
ಪ್ರತಿಬಿಂಬ ಬಿದ್ದ
ಉದ್ಬದ್ಧ ಶುದ್ಧ ನೀರೇ ನೀನೇ

ಎಚ್ಚೆತ್ತು ಎದ್ದ ಆಕಾಶದುದ್ಧ
ದರಗಿಳಿಯಲಿದ್ದ ಧೀರೇ
ಸಿರಿವಾರಿಜಾತ ವರ ಪಾರಿಜಾತ
ತಾರಾ ಕುಸುಮದಿಂದ
ಬೃಂದಾರ ವಂದ್ಯ
ಮಂದಾರ ಗಂದ
ನೀನೇ ತಾಯಿ ತಂದೆ
ರಸ ಪೂರ ಜನ್ಯ
ನೀನಲ್ಲ ಅನ್ಯ
ಸಚ್ಚಿದಾನಂದ ಕನ್ಯ
ಇಳಿದು ಬಾ ತಾಯಿ ಇಳಿದು ಬಾ

ಬಂದಾರೆ ಬಾರೆ
ಒಂದಾರೆ ಸಾರೆ
ಕನ್ದಾರೆ ತಡವರೇನೇ
ಅವತಾರವಂದ ಎಂದಾರೆ ತಾಯಿ
ಈ ಅಧಃ ಪಾತವನ್ನ
ಹರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ

ಧುಂ ಧುಂ ಎಂದಂತೆ ದುಡುಕೆ ಬಾ
ನಿನ್ನ ಕಂದನ್ನ ಹುಡುಕೆ ಬಾ
ಹುಡುಕೆ ಬಾ ತಾಯಿ ದುಡುಕೆ ಬಾ
ಹರನ ಹೊಸತಾಗೆ ಹೊಳೆದು ಬಾ
ಬಾಳು ಬೆಳಕಾಗಿ ಬೆಳೆದು ಬಾ
ಶಂಬು ಶಿವ ಹರನ ಚಿತ್ತ ಬಾ
ದತ್ತ ನರಹರಿಯ ಮುತ್ತ ಬಾ
ಅಂಬಿಕಾತನಯನತ್ತ ಬಾ

ಇಳಿದು ಬಾ ತಾಯಿ ಇಳಿದು ಬಾ